Indian Journal of History and Archaeology

ISSN (E):2582-225X
VOL-1 ISSUE 5, JAN-FEB, 2020, 29-38

# ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಚಳವಳಿಗಳು ಮತ್ತು ನಾಯಕತ್ವದ ಚಾರಿತ್ರಿಕ ಹಿನ್ನೆಲೆ

ಡಾ.ಮೋಹನ.ಎಚ್.ಎಂ.

ಡಾ.ಮೋಹನ.ಎಚ್.ಎಂ.
ಎಂ 12, ಹತ್ತನೇ ಅಡ್ಡರಸ್ತೆ,
ಜೆಸಿಇ ಕಾಲೇಜು ಮುಂಬಾಗ,
ಮಾನಸಗಂಗೋತ್ರಿ,
ಮೈಸೂರು-06

ಜಾತಿ ಎಂಬುದು ಸನಾತನೀಯ ಮತೀಯವಾದಿಗಳಿಗೆ ಬಲುಹರಿತವಾದಂಥ ಆಯುಧವೇ ಆಗಿರುತ್ತದೆ. ಭಾರತ ದೇಶವೂ ಬಹುಮುಖ್ಯವಾಗಿ 'ಜಾತಿ' ವ್ಯವಸ್ಥೆಯ ಶ್ರೇಣೀಕೃತವಾಗಿದ್ದು, ಈ 'ವರ್ಣ' ವ್ಯವಸ್ಥೆಯಲ್ಲಿ ಕೇವಲ ನಾಲ್ಕು ವರ್ಗಗಳಿದ್ದವು. ಆದರೆ ಇತ್ತೀಚಿನ ದಿನಗಳಲ್ಲಿ ನಾಲ್ಕು ಸಾವಿರಕ್ಕಿಂತ ಹೆಚ್ಚು ಜಾತಿಗಳು ಸೃಷ್ಟಿಯಾಗಿವೆ. ಇದಕ್ಕೆ ಕಾರಣ ಜಾತಿ ಮತ್ತು ಜಾತಿಗಳ ನಡುವಿನ ಶ್ರೇಷ್ಟತೆ, ಅಸಮಾನತೆ ಅವುಗಳಲ್ಲಿ ಕೆಲವು ಮುಂದುವರೆದ ಜಾತಿಗಳಾದರೆ ಕೆಲವು ಹಿಂದುಳಿದ ಜಾತಿಗಳು ಕೆಲವು ಜಾತಿಗಳು ಸಮಾಜದ ಮುಖ್ಯವಾಹಿನಿಯಡೆಗೆ ಬರಲು ಸಾಧ್ಯವಾಗಿಲ್ಲ. ಅವುಗಳೇ ಈ ಬಹುಸಂಖ್ಯಾತ ಹಿಂದುಳಿದವರು ಶೋಷಿತರು ಮತ್ತು ದಲಿತರು. ಇಂಥ ವ್ಯವಸ್ಥೆಯ ವಿರುದ್ಧ ಹಲವಾರು ಸಮಾಜ ಸುಧಾರಕರು ಅದರಲ್ಲೂ ಮಹನೀಯರು ಈ ಸಾಮಾಜಿಕ ನ್ಯಾಯ, ಆರ್ಥಿಕ ಸಮಾನತೆ ಹಾಗೂ ರಾಜಕೀಯ ಪ್ರಾತಿನಿಧ್ಯತೆಗಾಗಿ ಹೋರಾಟವನ್ನೇ ಮಾಡಿದವರು. ಸಾಮಾಜಿಕ ಅಸಮಾನತೆಯು ಎಲ್ಲಾ ಸಮಾಜಗಳಲ್ಲೂ ಕಂಡುಬಂದರೂ ಹಿಂದೂ ಸಮಾಜದಲ್ಲಿ ಇದು ಅತೀ ಆಳವಾಗಿ ಬೇರೂರಿದೆ.

ಭಾರತ ದೇಶದ ಬ್ರಾಹ್ಮಣೇತರ ಜಾತಿಗಳಲ್ಲಿ ಶಿಕ್ಷಣದ ಅರಿವು ಹರಡಿ ಹೊಸ ಬುದ್ಧಿಜೀವಿ ವರ್ಗವು ವಿಕಾಸವಾಗಲು ಆರಂಭಿಸಿರುತ್ತದೆ. ಇದರ ಕಾರಣ ಮತ್ತು ಪರಿಣಾಮದಿಂದಾಗಿಯೇ ದೇಶದ ಹಲವು-ಹತ್ತು ಪ್ರಾಂತ್ಯಗಳಲ್ಲಿ ಅಬ್ರಾಹ್ಮಣ ಚಳವಳಿಗಳು ಕಾಣಲಾರಂಭಿಸಿರುತ್ತವೆ. ಇದು ಪ್ರಜಾಸತ್ತಾತ್ಮಕ ಮಾದರಿಯಲ್ಲಿ

ನಡೆದ ಚಳವಳಿಯೇ ಆಗಿತ್ತು ಎನ್ನಬಹುದು. ಇದಕ್ಕೆ ಸಾಕ್ಷಿ ಎಂಬಂತೆ; ಮಹಾರಾಷ್ಟ್ರದಲ್ಲಿ ಮಹಾತ್ಮ ಜ್ಯೋತಿಬಾ ಫುಲೆ ಅವರ ನೇತೃತ್ವದಲ್ಲಿ ಆರಂಭಗೊಂಡು ಅದು ಅಂಬೇಡ್ಕರ್ ಅವರಿಂದ ವ್ಯಾಪಕವಾಗಿ ಬೆಳೆದು, ಕೇರಳದಲ್ಲಿ ಶ್ರೀನಾರಾಯಣಗುರು ಅವರಿಂದ ಸ್ಫೂರ್ತಿಯನ್ನು ಪಡೆದು ಒಂದು ಬಹುದೊಡ್ಡ ಮಾದರಿಯ ಆಂದೋಲನವಾಗಿಯೇ ಬೆಳೆದಿರುತ್ತದೆ. ಹಾಗೆಯೇ, ತಮಿಳುನಾಡಿನಲ್ಲಿ ದ್ರಾವಿಡ ಆಂದೋಲನವೆಂಬ ಹೆಸರಿನಲ್ಲಿ ಹುಟ್ಟಿಕೊಂಡ ಈ ಮಾದರಿಯ ಚಳವಳಿಯು ಜೆಸ್ಟೀಸ್ ಪಕ್ಷವೆಂಬ ರಾಜಕೀಯ ಪಕ್ಷವೊಂದರ ಹುಟ್ಟಿಗೆ ಇದು ಪ್ರಮುಖವಾಗಿ ಕಾರಣವಾಯಿತು. ಈ ಪಕ್ಷವು ಅಂದು ತಮಿಳುನಾಡಿನ ವಿಧಾನಸಭೆಯನ್ನು ಪ್ರವೇಶಿಸಿ ಹಿಂದುಳಿದ ಜನವರ್ಗಗಳ ಪರವಾಗಿ ಗಟ್ಟಿಧ್ವನಿಯನ್ನು ಮೊಳಗಿಸಿತು. ಹಾಗೆಯೇ, ಸಮಷ್ಠಿ ಹಿಂದುಳಿದ ವರ್ಗಗಳಿಗೆ ಮೀಸಲಾತಿಯು ಬೇಕು ಎಂಥ ಪ್ರಬಲ ಕೂಗಿನೊಂದಿಗೆ ಆರಂಭಗೊಂಡಿತು. ಈ ಕೂಗಿನ ಪ್ರತಿಧ್ವನಿಯ ಕಹಳೆಯು ಕರ್ನಾಟಕ ರಾಜ್ಯದಲ್ಲಿಯೂ ಮೊಳಗಿತು.

ಈ ಲೇಖನದ ಕೇಂದ್ರ ವಸ್ತುವಿಷಯವನ್ನು ಆಧರಿಸಿ ಚರ್ಚಿಸುವುದಾದರೆ; ಕರ್ನಾಟಕ ರಾಜ್ಯದ ಮಟ್ಟಿಗೆ ಹಿಂದುಳಿದ ವರ್ಗಗಳ ಚಳವಳಿಯು ಆಗಿನ ಮೈಸೂರು ರಾಜ ಸಂಸ್ಥಾನದ ಸರ್ಕಾರೀ ಉದ್ಯೋಗ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬ್ರಾಹ್ಮಣೇತರರಿಗೆ ಮೀಸಲಾತಿಯನ್ನು ನೀಡಬೇಕು ಎಂಬಂಥ ಪ್ರಮುಖ ಬೇಡಿಕೆಯೊಂದಿಗೆ ನಡೆದಿರುತ್ತದೆ.

ಕರ್ನಾಟಕ ರಾಜ್ಯದ ಮಟ್ಟಿಗೆ ಹಿಂದುಳಿದ ವರ್ಗಗಳ ಚಳವಳಿಯನ್ನು ಪರಿವೀಕಣೆಗೆ ಒಳಪಡಿಸಿದಾಗ; ನಮ್ಮ ಮುಂದೆ ಪ್ರಪ್ರಥಮ ಬಾರಿಗೆ ಬರುವುದು 12ನೇ ಶತಮಾನದ ಬಸವಣ್ಣ ಅವರು ರೂಪಿಸಿದ್ದ ಸಾಮಾಜಿಕ ಕ್ರಾಂತಿಯ ಕಿಡಿ. ಇತರೆ ಜನವರ್ಗದವರೇ ಆಗಿದ್ದಂಥ ಕ್ಷೌರಿಕರು, ಮಡಿವಾಳರು, ಒಕ್ಕಲಿಗರು, ನೇಯ್ಗೆಯವರು, ಅಕ್ಕಸಾಲಿಗರು, ಬಡಗಿಗಳು, ಚಿಪ್ಪಿಗರು, ಸತ್ತಿಗೆ ಕಾಯಕದವರು, ಬೆಸ್ತರು, ಅಂಬಿಗರು, ಗೊಲ್ಲರು, ಈಡಿಗರಂಥ ಶರಣರೊಟ್ಟಿಗೆ ನಡೆಸಿದಂಥ ಚಳವಳಿಯೇ ಹಿಂದುಳಿದ ವರ್ಗಗಳ ಚಳವಳಿಯೆಂದು ಆರಂಭವಾಯಿತು ಎನ್ನಬಹುದು. ಇವೇ ಮೊದಲಾದ ವರ್ಗದವರನ್ನು ಬಸವಣ್ಣ ಸಂಘಟಿಸಿದ ಶರಣರ ತಂಡದಲ್ಲಿದ್ದ ದಲಿತರನ್ನೊಳಗೊಂಡಂತೆ ಹಿಂದುಳಿದ ವರ್ಗದವರು, ವೈದಿಕ ಬ್ರಾಹ್ಮಣರ ಪ್ರಾಬಲ್ಯದ ವಿರುದ್ಧ ಆರಂಭಗೊಂಡಂಥ ಈ ಚಳವಳಿಯು ಕಾಲಾನಂತರದಲ್ಲಿ ತನ್ನ ಪ್ರಾಬಲ್ಯವನ್ನು ಕಳೆದುಕೊಳ್ಳುತ್ತಾ ಹೋಗಿರುತ್ತದೆ. ಆದರೂ ಕೂಡ ಬ್ರಾಹ್ಮಣರಲ್ಲದೇ ಇರುವ ಕೆಲವು ಜಾತಿ–ಪಂಗಡಗಳು ಶಿಕ್ಷಣವನ್ನು, ಸಂಪತ್ತನ್ನು ಮತ್ತು ರಾಜಕೀಯ ಅಧಿಕಾರಗಳನ್ನು ಹೊಂದುವ ಮೂಲಕ ಎರಡನೆಯ ಮತ್ತು ಮೂರನೆಯ ಸ್ಥಾನದಲ್ಲಿದ್ದವು. ಹೀಗೆ, ಶರಣರ ಸಾಹಿತ್ಯ, ಶರಣರ ಚಳವಳಿ ಇತ್ಯಾದಿಗಳನ್ನು ಸಮಾನತೆಗಾಗಿ ನಡೆದ ಎಲ್ಲ ವಿವಿಧ ಹೋರಾಟಗಳ ಸಂದರ್ಭದಲ್ಲೆಲ್ಲ ನೆನಪಿಸಿಕೊಳ್ಳುವ, ಅದರಿಂದ ಪ್ರೇರಣೆ ಪಡೆಯುವ, ಧೈರ್ಯ

ಸ್ಫೂರ್ತಿಗಳಿಂದ ಕಾರ್ಯೋನ್ಮುಖರಾಗುವ ಪ್ರವೃತ್ತಿಯನ್ನು ನೋಡುತ್ತಿದ್ದೇವೆ. ಹಾಗೆಯೇ ದಾಸ ಸಾಹಿತ್ಯವು ಕೂಡ ತನ್ನ ಕಾಲಾವಧಿಯಲ್ಲಿ ಸಾಮಾಜಿಕ ಸಮಾನತೆಯನ್ನು ಮತ್ತು ಅದರ ಅಗತ್ಯತೆಯನ್ನು ಎತ್ತಿ ಹೇಳುತ್ತವೆ. ಹಿಂದುಳಿದ ವರ್ಗಗಳ ಚಳವಳಿ ಮತ್ತು ಶೋಷಿತ ವರ್ಗದ ಚಳವಳಿ ಬೇರುಗಳು 12ನೇ ಶತ'ಮಾನದಷ್ಟು ಹಿಂದಕ್ಕೆ ಹರಿದಿವೆಂಬುದನ್ನು ಒಪ್ಪಲೇಬೇಕಾದ ಸಂಗತಿ. ಜಾತಿ ವಿಮೋಚನೆ ಚಳವಳಿಯನ್ನು ಈ ಹಂತದಿಂದಲೇ ಗುರುತಿಸುವ ಪದ್ಧತಿ ಬೆಳೆದು ಬಂದಿದ್ದು ಕೆಳವರ್ಗದ ಆಶಯ ಮತ್ತು ಅಭಿವ್ಯಕ್ತಿಯಾಗಿ ವಚನ ಸಾಹಿತ್ಯ ಸೃಷ್ಟಿಗೊಂಡುದು ಮತ್ತು ಬೆಳೆದುಬಂದುದು ಇದಕ್ಕೆ ಪ್ರಮುಖ ಕಾರಣವೆನ್ನಬಹುದು. ಸಾಮಾಜಿಕ ನ್ಯಾಯ ಸ್ಥಾಪನೆಗಾಗಿ ಹಿಂದುಳಿದ ವರ್ಗಗಳಿಗೆ ಮತ್ತು ಶೋಷಿತವ ವರ್ಗಗಳಿಗೆ ಶರಣ ಪಂಥವು ನೆರವು ನೀಡಿ ಪ್ರೋತ್ಸಾಹಿಸಿತು.

ವೀರಶೈವ ಚಳವಳಿಯಾಗಿಯೂ ಮಾರ್ಪಟ್ಟ ಶರಣರ ಚಳವಳಿ 12ನೇಯ ಶತಮಾನದಿಂದಲೂ ಒಂದಲ್ಲ ಒಂದು ವಿಧದಲ್ಲಿ, ಒಂದಲ್ಲ ಒಂದು ಕ್ಷೇತ್ರದಲ್ಲಿ ತನ್ನ ಅಸ್ತಿತ್ವ ಉಳಿಸಿಕೊಂಡೇ ಬಂದಿದ್ದೆತ್ತೆನ್ನಲು 16ನೇ ಶತಮಾನದ ಕೊನೇ ದಶಕದಲ್ಲಿ ನಡೆದ ಒಂದು ಘಟನೆಯೇ ಸಾಕ್ಷಿ. ಹಿಂದುಳಿದ ವರ್ಗಗಳ ಚಳವಳಿಯ ಮೊದಲ ಕಿಡಿ ಮೈಸೂರಿನಲ್ಲಿ ಹಾರಿದ್ದು ಈ ಘಟನೆಯಿಂದಲೇ ಎಂಬ ಅಭಿಪ್ರಾಯವೂ ಇದೆ. 1891ರಲ್ಲಿ ಮೈಸೂರು ಸಂಸ್ಥಾನದಿಂದ ಜನಗಣತಿ ಪ್ರಕಟವಾದಾಗ, ಅದರಲ್ಲಿ ಲಿಂಗಾಯಿತ ವರ್ಗದವರನ್ನು 'ಶೂದ್ರ'ರೆಂದು ಸಂಭೋಧಿಸಲಾಗಿತ್ತು[3].

ಬ್ರಿಟಿಷ್‌ರ ಆಡಳಿತದ ಕಾಲಾವಧಿಯಲ್ಲಿ ಈ ಮೇಲೆ ಹೇಳಿರುವಂಥ ಪರಿಸ್ಥಿತಿಯು ಬದಲಾವಣೆಗೊಳ್ಳತೊಡಗಿತ್ತು. ಏಕೆಂದರೆ, ಈ ಬ್ರಿಟಿಷ್ ಪ್ರಭುತ್ವವು ತನ್ನ ಆಳ್ವಿಕೆಯ ಅಂತ್ಯಭಾಗದಲ್ಲಿ ಕಲ್ಪಿಸಿದ್ದಂಥ ಶಿಕ್ಷಣದ ಅವಕಾಶಗಳನ್ನು ಪಡೆದುಕೊಂಡ ಕೆಲಜನವರ್ಗಗಳು ಬಹುಬೇಗನೆ ಬದಲಾಗತೊಡಗಿದ್ದವು. ಈ ತೆರೆನಾದ ಆಧುನಿಕ ಶಾಲೆಗಳಲ್ಲಿ ಶಿಕ್ಷಣವನ್ನು ಪಡೆದಂಥ ಬ್ರಾಹ್ಮಣರು ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಸೇವೆಗಳಲ್ಲೂ ಕೂಡ ಸಿಂಹಪಾಲನ್ನು ಪಡೆದುಕೊಂಡರು. ಈ ಸಂದರ್ಭದಲ್ಲಿ ಮೈಸೂರು ಪ್ರಾಂತ್ಯದಲ್ಲಿನ ಬ್ರಾಹ್ಮಣೇತರರು ಸಮಾನತೆಗಾಗಿ ಪ್ರಬಲವಾದಂಥ ಒತ್ತಾಯವನ್ನು ತಂದರು. ಕ್ರೈಸ್ತರು ಮತ್ತು ಬ್ರಹ್ಮ ಸಮಾಜದವರು ಇದನ್ನು ಬೆಂಬಲಿಸುವುದರೊಂದಿಗೆ 19ನೇ ಶತಮಾನದ ಕೊನೆಯ ಹೊತ್ತಿಗೆ ಕರ್ನಾಟಕದ ಮೊಟ್ಟಮೊದಲ ಹಿಂದುಳಿದ ವರ್ಗಗಳ ಚಳವಳಿಯೂ ಹುಟ್ಟಿಕೊಂಡಿತ್ತು. ಕರ್ನಾಟಕದಲ್ಲಿನ ಹಿಂದುಳಿದ ವರ್ಗಗಳ ಚಳವಳಿಯೂ ಕೂಡ ಬ್ರಾಹ್ಮಣೇತರ ಚಳವಳಿಯ ಒಂದು ಪ್ರಧಾನವಾದಂಥ ಭಾಗವೇ ಆಗಿರುತ್ತದೆ.

1857–1881ರ ನಡುವಿನ ಮೈಸೂರು ಸಂಸ್ಥಾನವು ಕಮೀಷನರ ಆಳ್ವಿಕೆಯ ಕಾಲಾವಧಿಯದಲ್ಲಿ ಬ್ರಾಹ್ಮಣರ ಬ್ರಾಹ್ಮಣೀಕೆಯ ಅಧಿಕಾರದ ಏಕಸ್ವಾಮ್ಯವು ಹೆಚ್ಚು ಪ್ರಾಬಲ್ಯತೆ ಮೆರೆಯುವುದನ್ನು

ಮುಂದುವರೆಸಿರುವುದು ಇತಿಹಾಸದಿಂದ ತಿಳಿಯಬಹುದು. ಈ ಪರಿಸ್ಥಿತಿ ಬ್ರಿಟೀಷರ ಕಾಲದಲ್ಲಿಯೂ ಇತ್ತು. ಆದ್ದರಿಂದಲೇ ಬ್ರಿಟಿಷ್ ಪ್ರಭುತ್ವದ ಪ್ರಜಾಸತ್ತಾತ್ಮಕ ಶಾಸನಸಭೆಯು ಜನರಿಗೆ ತಮ್ಮ ಸಂಕಟ ಮತ್ತು ದೂರುಗಳನ್ನು ವ್ಯಕ್ತಪಡಿಸುವಂತೆ ವೇದಿಕೆಯನ್ನು ಒದಗಿಸಿತು ಮತ್ತು ಒಂದು ಪ್ರಣಾಳಿಕೆಯನ್ನು ಕೂಡ ಪಾಸು ಮಾಡಿತು. ಅಂದಿನ ಮೈಸೂರು ರಾಜ ಸಂಸ್ಥಾನ ಸನ್ನಿಧಾನದ ಸರ್ಕಾರವು 1874ರಲ್ಲಿ ಈ ಒತ್ತಾಯಕ್ಕೆ ಮಣಿದಿರುತ್ತದೆ. ಆದರೆ, 1875ರಿಂದ ಮೈಸೂರು ರಾಜ್ಯದಲ್ಲಿ ಸಾರ್ವಜನಿಕ ಸೇವೆ ನೇಮಕಾತಿಗೆ ಸಂಬಂಧಿಸಿದಂತೆ ವಿವಾದ ಉಂಟಾಯಿತು. ಆದರೂ ಕೂಡ ಸರ್ಕಾರವು ಸಾರ್ವಜನಿಕ ಹುದ್ದೆಗಳಿಗೆ ಸಂಬಂಧಿಸಿದಂತೆ ಪೋಲೀಸ್‌ನಂಥ ಹುದ್ದೆಗಳಿಗೆ ಈ ಬ್ರಾಹ್ಮಣೇತರರಿಗೂ ಅವಕಾಶವನ್ನು ನೀಡುವ ಮೀಸಲಾತಿಯನ್ನು ಕಲ್ಪಿಸಿರುತ್ತದೆ[೨]. ಈ ಚಳವಳಿಯೂ ಮೂಡಿಸಿದಂಥ ಜನಜಾಗೃತಿಯಿಂದ ಭಾರತದಲ್ಲಿ 19ನೆಯ ಶತಮಾನದ ಉತ್ತರಾರ್ಧ ಮತ್ತು 20ನೆಯ ಶತಮಾನದ ಈ ಚಳವಳಿಯು ಪ್ರಾರಂಭವಾಯಿತೆನ್ನಬಹುದು. ಈ ಕಾಲಾಸಂದರ್ಭದಲ್ಲಿಯೇ ಕರ್ನಾಟಕ ರಾಜ್ಯದಲ್ಲಿ ವೀರಶೈವ ಮಹಾಸಭಾ, ಒಕ್ಕಲಿಗರ ಸಂಘ, ಕುರುಬರ ಸಂಘಗಳಂಥ ಬ್ರಾಹ್ಮಣೇತರ ಜಾತಿ ವರ್ಗಗಳ ಸಂಘಟನೆಗಳು ಹುಟ್ಟಿಕೊಂಡವು. ಈ ಜಾತಿಯಾಧರಿತ ಸಂಘಟನೆಗಳು ಆಗ ತಾನೇ ಬೆಳೆಯತೊಡಗಿದ್ದ ಹಿಂದುಳಿದ ವರ್ಗಗಳ ಚಳವಳಿಗೆ ಪ್ರಬಲವಾದಂಥ ಒತ್ತಾಸೆಯನ್ನು ನೀಡತೊಡಗಿದ್ದವು. ಇದರ ಒಂದು ಭಾಗವಾಗಿಯೇ 1917ರಲ್ಲಿ ಬೆಂಗಳೂರಿನಲ್ಲಿ ಹಿಂದುಳಿದ ವರ್ಗಗಳ ಪ್ರಪ್ರಥಮ ಸಮಾವೇಶವನ್ನೂ ಕೂಡ ನಡೆಸಲಾಗಿರುತ್ತದೆ[೨]. ಇದು ಕೂಡ ಕರ್ನಾಟಕ ರಾಜ್ಯದಲ್ಲಿನ ಹಿಂದುಳಿದ ವರ್ಗಗಳ ಚಳವಳಿಗೆ ದಿಕ್ಸೂಚಿಯೇ ಆಗಿರುತ್ತದೆ.

1915–17ರ ಕಾಲಾವಧಿಯಲ್ಲಿ ಎಂ.ಬಸವಯ್ಯ ಎಂಬುವರ ನೇತೃತ್ವದಲ್ಲಿ ಬಹಳ ಕ್ರಾಂತಿಕಾರಕವಾಗಿಯೇ ನಡೆದಿರುತ್ತದೆ[೩]. ಈ ಚಳವಳಿಯು ನಡೆದಿರುವ ಕಾರಣ ಮತ್ತು ಅದರ ಪರಿಣಾಮದಿಂದಾಗಿಯೇ 1917ರಲ್ಲಿ ಮಿಲ್ಲರ್ ಸಮಿತಿಯು ನೇಮಕವಾಗಲು ಕಾರಣೀಭೂತವಾಗಿರುತ್ತದೆ. ಅಂದಿನ ಕಾಲದ ಬ್ರಿಟಿಷ್ ಭಾರತದಲ್ಲಿ ಎಲ್ಲಿಯೂ ಈ ತೆರನಾದಂಥ ಕ್ರಾಂತಿಕಾರವಾದ ಕೂಗು ಮತ್ತು ಚಳವಳಿಯೂ ನಡೆದೇ ಇರಲ್ಲಿಲ್ಲ. ಇದು ಇಡೀ ದೇಶದಲ್ಲಿಯೇ ಹಿಂದುಳಿದ ಜನವರ್ಗಗಳ ಹಿತಾರಕ್ಷಣೆಗಾಗಿಯೇ ಹೂಡಲಾಗಿದ್ದಂಥ ಪ್ರಪ್ರಥಮ ಹೋರಾಟವೂ ಕೂಡ ಇದೇ ಆಗಿತ್ತು ಎಂದು ಹೇಳಬಹುದು.

1881–1919ರ ಅವಧಿಯಲ್ಲಿ ಮದ್ರಾಸ್ ಮತ್ತು ಮೈಸೂರು ಬ್ರಾಹ್ಮಣರ ನಡುವೆ ಘರ್ಷಣೆ ಇತ್ತು. ಈ ವಿವಾದವು ಸರ್.ಎಂ.ವಿಶ್ವೇಶ್ವರಯ್ಯ ಅವರನ್ನು 1912ರಲ್ಲಿ ಮೈಸೂರಿನ ದಿವಾನರನ್ನಾಗಿ ನೇಮಕಾತಿ ಮಾಡುವುದರ ಮೂಲಕ ಕೊನೆಗೊಂಡಿತು[೩]. ಆಗಲೇ ಬ್ರಾಹ್ಮಣೇತರರು ಸಾಮಾಜಿಕ ಸಮಾನತೆಗಾಗಿ ಒತ್ತಾಯ ಮಾಡಿದರು. ಆಗ ಹಿಂದುಳಿದ ವರ್ಗಗಳ ಚಳವಳಿಯ ಬೀಜ ಮೊಳಕೆಯೊಡೆಯಲಾರಂಭಿಸಿತು.

ಈ ಹಿಂದುಳಿದ ವರ್ಗಗಳು ತಾವೇ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ, ರಾಜಕೀಯ ಔದ್ಯೋಗಿಕ ಸೌಲಭ್ಯಗಳನ್ನು ಹೆಚ್ಚಿಸಿ ಈ ಮೂಲಕ ಸಮಾಜದಲ್ಲಿ ಅಂತಸ್ತನ್ನು ಪಡೆಯಲೆಂಬ ಹಂಬಲದಿಂದ ಪ್ರಾರಂಭಿಸಿದ ಹೋರಾಟವೇ ಈ ಹಿಂದುಳಿದ ವರ್ಗಗಳ ಚಳವಳಿ. ಹೀಗೆ ಐತಿಹಾಸಿಕವಾಗಿ ಬೆಳೆದು ಬಂದ ಹಿಂದುಳಿದ ವರ್ಗಗಳ ಜಾಗೃತ ಬೆಳವಣಿಗೆ ಮೈಸೂರಿನ ಸಂದರ್ಭದಲ್ಲಿ ಇತ್ತೀಚಿನ ದಿನಗಳಲ್ಲಿ ರಾಜಕೀಯವಾಗಿ, ಸಾಮಾಜಿಕವಾಗಿ, ಬಹುಸಂಖ್ಯಾತ ವಂಚಿತ ವರ್ಗವನ್ನು ಎಚ್ಚರಗೊಳಿಸಿದ್ದು, ಅವರು ರಾಜಕೀಯವಾಗಿ ಸಂಘಟಿತರಾಗಲು ಕಾರಣವಾಗಿರುತ್ತದೆ.

ಸಾಮಾಜಿಕವಾಗಿ, ವೀರಶೈವರು ಬ್ರಾಹ್ಮಣರಿಗೆ ಸಮಾನರೆಂಬುದನ್ನು ಎತ್ತಿ ಹಿಡಿಯಲು 'ದಿ ಮೈಸೂರ್ ಸ್ಟಾರ್' ಹೆಸರಿನ ಕನ್ನಡ ವಾರ ಪತ್ರಿಕೆಯನ್ನು ಆರಂಭಿಸಿದರು. ಅಲ್ಲದೇ ಬ್ರಾಹ್ಮಣರಷ್ಟೇ ಸಮರ್ಥರಾಗಿ ವೀರಶೈವರು ಸಂಸ್ಕೃತ ಭಾಷೆಯಲ್ಲಿ ಕೃತಿಗಳನ್ನು ರಚಿಸಬಲ್ಲರೆಂಬುದನ್ನು ತೋರಿಸಲು ವಿದ್ವಾನ್ ಪಿ.ಆರ್. ಕರಿಬಸವ ಶಾಸ್ತ್ರಿ ಮತ್ತು ಎನ್.ಆರ್. ಕರಿಬಸವ ಶಾಸ್ತ್ರಿಗಳನ್ನು ಪ್ರೋತ್ಸಾಹಿಸಿದರು. ಪರಿಣಾಮವಾಗಿ ಕೆಲವು ಉತ್ಕೃಷ್ಟ ಕಾವ್ಯಕೃತಿಗಳು ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಪ್ರಕಟಗೊಂಡವು. ಆ ನಂತರ ಎನ್.ಆರ್. ಕರಿಬಸವಶಾಸ್ತ್ರಿಗಳು ವೀರಶೈವಮತ ಪ್ರಕಾಶಿಕ ಎಂಬ ಮಾಸ ಪತ್ರಿಕೆಯ ಪ್ರಕಟನೆಯನ್ನು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಆರಂಭಿಸುವುದರ ಮೂಲಕ ಬ್ರಾಹ್ಮಣರ ವಿರುದ್ಧ ಎತ್ತಿದ ಧ್ವನಿಗೆ ತಮ್ಮದನ್ನೂ ಸೇರಿಸಿದರು. ಈ ಪ್ರತಿಭಟನೆ ಜಾತಿ ಪ್ರತಿಷ್ಠತೆಗೆ ನೇಮಕಗೊಂಡಂತೆ ಮೇಲ್ನೋಟಕ್ಕೆ ತೋರಿದರೂ, ಪರಂಪರೆಯ ಪ್ರಭಾವವೂ ಇರುವುದನ್ನು ಗಮನಿಸಬಹುದು. ಈ ಸಂಘಟನೆಯಲ್ಲಿ ಲಿಂಗಾಯಿತರಲ್ಲದೆ, ಒಕ್ಕಲಿಗ, ವೈಶ್ಯ, ಜೈನ ಮೊದಲಾದ ಜಾತಿ ವರ್ಗಗಳ ಬುದ್ಧಿ ಜೀವಿಗಳು ವರ್ತಕರು ಸಕ್ರಿಯರಾಗಿದ್ದರು. ಇದು ಗಮನಾರ್ಹ ವಿಷಯ. ಈ ನೆಲೆಯಲ್ಲಿ ಬ್ರಾಹ್ಮಣೇತ್ತರ ವರ್ಗಗಳ ಬೇಡಿಕೆಯನ್ನು ಪರೋಕ್ಷವಾಗಿ ಈ ಪ್ರಯತ್ನ ಬೆಂಬಲಿಸಿದುದು ಸ್ಪಷ್ಟ.

ಶೈಕ್ಷಣಿಕವಾಗಿ ಸುಧಾರಣೆಗೊಳ್ಳುವ ಎಲ್ಲಾ ಲಕ್ಷಣಗಳು, ಕಂಡುಬರುತ್ತಿದ್ದಂತೆಯೇ, ಸರ್ಕಾರಿ ಹುದ್ದೆಗಳಲ್ಲಿ ಸಮಾನ ಅವಕಾಶ ಪಡೆದುಕೊಳ್ಳುವ ನಿಟ್ಟಿನಲ್ಲಿ ಹುಟ್ಟಿಕೊಂಡ ಹಿಂದುಳಿದ ವರ್ಗಗಳ ಚಳವಳಿ ರಾಜ್ಯದ ರಾಜಕಾರಣದ ದಿಕ್ಕನ್ನೇ ಬದಲಾಯಿಸುವಂಥದ್ದು. ಈಗಾಗಲೇ ಪ್ರಸ್ತಾಪಿಸಿರುವಂತೆ 1874ರ ಆಜ್ಞೆಯ ಪ್ರಕಾರ ಪೋಲೀಸ್ ಇಲಾಖೆಯ ಸ್ಥಾನಗಳನ್ನು ತುಂಬುವಲ್ಲಿ ಪ್ರತಿ ಹತ್ತು ಹುದ್ದೆಗಳಿಗೆ ಎಂಟು ಜನ ಬ್ರಾಹ್ಮಣೇತರರನ್ನು ಆಯ್ಕೆ ಮಾಡಬೇಕೆಂಬುದಾಯಿತು. ಇದು ಸಾರ್ವಜನಿಕ ಸೇವೆಯಲ್ಲಿ ತಮಗೆ ಅವಕಾಶಬೇಕೆಂದು ಒತ್ತಾಯ ತಂದ ಬ್ರಾಹ್ಮಣೇತರರಿಗೆ ಸಂದಂಥ ಜಯವೇ ಆಗಿರುತ್ತದೆ. ಅನಂತರವೂ ಈ ಆಜ್ಞೆ ಊರ್ಜಿತಗೊಂಡಿತು. ಮುಖ್ಯವಾಗಿ ಉತ್ತರದ ಮತ್ತು ದಕ್ಷಿಣದ ರಾಜ್ಯಗಳಲ್ಲಿ ನಡೆಯಲಾರಂಭಿಸಿದ್ದ ಈ ಬಗೆಯ ಚಳವಳಿಗಳು ಪರಸ್ಪರ ಪ್ರೇರಣೆ ಪ್ರೋತ್ಸಾಹಗಳಿಂದ ಇನ್ನಷ್ಟು ತೀವ್ರಗೊಂಡಿತು. ಇವು ಬ್ರಾಹ್ಮಣೇತರ

ಚಳವಳಿಯಾಗಿ ಮಾರ್ಪಟ್ಟಿದ್ದರಿಂದ ಅಂದಿನ ಅಧಿಕಾರಿಶಾಹಿ ಇದರ ಲಾಭ ಪಡೆಯಲು ಹಂಬಲಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಬ್ರಾಹ್ಮಣೇತರ ಚಳವಳಿಯ ಬೀಜಾಂಕುಶವಾದುದು 19ನೇಯ ಶತಮಾನದ ಕೊನೆಯ ದಶಕದಲ್ಲಾದರೂ ಅದು ಹೆಚ್ಚು ಕ್ರಿಯಾಶೀಲಗೊಂಡುದು ಈ ಶತಮಾನದ ಅಂದರೆ 20ನೇ ಶತಮಾನದ ಮೊದಲನೇ ದಶಕದಲ್ಲಿ ಎಂದು ಹೇಳಬಹುದು

ಮೈಸೂರು ಸಂಸ್ಥಾನದಲ್ಲಿ ಅಂದಿನ ರಾಜಪ್ರಭುತ್ವವು 1881ರಲ್ಲಿ 'ಪ್ರಜಾಪ್ರತಿನಿಧಿ ಸಭಾ' ಎಂಬಂಥ ಒಂದು ಶಾಸನ ಸಭೆಯನ್ನು ಸ್ಥಾಪಿಸಿತು. ಈ ಸಭಾವು ಪ್ರಧಾನವಾಗಿ ರೈತರು ಮತ್ತು ವರ್ತಕ ವರ್ಗದ ಪ್ರತಿನಿಧಿಗಳನ್ನು ಒಳಗೊಂಡಿದದ್ದು ಮಾತ್ರ ವಿಶೇಷವೇ ಆಗಿರುತ್ತದೆ. ಆದ್ದರಿಂದ ಒಕ್ಕಲಿಗರು ಮತ್ತು ವೀರಶೈವರು ಒಟ್ಟಾಗಿರಲು ಸಹಜವಾಗಿಯೇ ಸಾಧ್ಯವಾಯಿತು. ಪರಿಣಾಮವಾಗಿ ಶೈಕ್ಷಣಿಕವಾಗಿ ಪ್ರಗತಿಪಥದಲ್ಲಿದ್ದು ಒಕ್ಕಲುತನದ‍ಲ್ಲಿ ಎರಡನೇ ದೊಡ್ಡ ವರ್ಗವೆನಿಸಿದ್ದ ವೀರಶೈವರು 1905ರಲ್ಲಿ 'ಮೈಸೂರು ಲಿಂಗಾಯಿತ ಶಿಕ್ಷಣ ನಿಧಿ ಸಂಘ' ಸ್ಥಾಪಿಸಿಕೊಂಡರು.  ಇದಕ್ಕೆ ಮುನ್ನ ಅಂದರೆ 1904 ರಲ್ಲಿ ಹಾನಗಲ್ಲಿನ ಕುಮಾರಸ್ವಾಮಿ ಅವರ ಪ್ರಯತ್ನದ ಫಲವಾಗಿ ಧಾರವಾಡದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾದ ಪ್ರಥಮ ಸಮ್ಮೇಳನ ಏರ್ಪಟ್ಟಿದ್ದು, ಅದರಲ್ಲಿ ವೀರಶೈವ ಶಿಕ್ಷಣಕ್ಕೆ ಆದ್ಯತೆ ನೀಡುವ ಹಾಗೂ ವೀರಶೈವ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿನಿಲಯಗಳನ್ನು ತೆರೆಯುವ ಬಗೆಗೆ ನಿರ್ಣಯ ಕೈಗೊಳ್ಳಲಾಗಿದ್ದಿತ್ತು. ಈ ಸಭೆಯಲ್ಲಿ ಭಾಗವಹಿಸಿದ್ದ ಸಿರಸಂಗಿ ಲಿಂಗರಾಜರು, ಅತ್ಯಂತ ಮುಂದುವರೆದ ಜನಸಮುದಾಯದವರು ಹಿಂದುಳಿದ ಕೋಮಿನ ಬಗೆಗೆ ಸಹಾನುಭೂತಿ, ಸಹಕಾರ  ತೋರಬೇಕೆಂದು ಹಾಗೂ ದೇಶದ ಐಕ್ಯತೆಗೆ ಭಂಗ ಬರದಂತೆ ಎಲ್ಲರ  ರಕ್ಷಣೆಗೆ ನಿಲ್ಲಬೇಕೆಂದು ಕರೆಯಿತ್ತುದುದು ಗಮನಾರ್ಹ. ಈ ಸಮ್ಮೇಳನದ ಪ್ರಭಾವ ಮೈಸೂರಿನ ವೀರಶೈವ ಧುರೀಣರ ಮೇಲೆ ಉಂಟಾದುದು ಸಹಜ. ಹಾಗೆಯೇ 1906 ರಲ್ಲಿ ಬಾಗಲಕೋಟೆಯ 'ಬಸವೇಶ್ವರ ವಿದ್ಯಾವರ್ಧಕ ಸಂಘವು' ಅಸ್ತಿತ್ವಕ್ಕೆ ಬಂದಿತು.

ಲಿಂಗಾಯಿತರ ಶಿಕ್ಷಣ ನಿಧಿ ಸಂಘದ ಸ್ಥಾಪನೆಯ ಅನಂತರ 1906ರಲ್ಲಿ ಬೆಂಗಳೂರಿನಲ್ಲಿ 'ಒಕ್ಕಲಿಗರ ಸಂಘ' ಅಸ್ತಿತ್ವಕ್ಕೆ ಬಂದಿತು. ಇದು ಒಕ್ಕಲಿಗ ಯುವ ಜನಾಂಗದ ಭವಿಷತ್ತಿನ ಬಗೆಗೆ ಕಾಳಜಿ ಹೊಂದಿದ್ದು, ಶಿಕ್ಷಣಕ್ಕೆ ಮತ್ತು ವಿದ್ಯಾರ್ಥಿನಿಲಯಗಳ ಸ್ಥಾಪನೆಗೆ ಹೆಚ್ಚು ಆದ್ಯತೆ ನೀಡತೊಡಗಿತು. ಬೆಂಗಳೂರು ಸೇರಿದಂತೆ ಹಳೆ ಮೈಸೂರು ರಾಜ್ಯದ ಪ್ರತಿಯೊಂದು ಜಿಲ್ಲಾ ಕೇಂದ್ರಗಳಲ್ಲಿಯೂ ಒಕ್ಕಲಿಗ ವಿದ್ಯಾರ್ಥಿನಿಲಯಗಳು' ಸ್ಥಾಪಿತಗೊಂಡವು. ದಿವಾನ್ ವಿ.ಪಿ. ಮಾಧವರಾಯರು ಒಕ್ಕಲಿಗರ ಸಂಘಕ್ಕಾಗಿ ಬೆಂಗಳೂರಿನಲ್ಲಿ ವಿಸ್ತಾರವಾದ ನಿವೇಶನಗಳನ್ನು ಕೊಡುವುದರಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಒಕ್ಕಲಿಗ ಸಮುದಾಯದ ಜಾಗೃತಿಗಾಗಿ 1907ರಲ್ಲಿ 'ಒಕ್ಕಲಿಗ ಪತ್ರಿಕೆ' ಸಹ ಆರಂಭಗೊಂಡಿತು. ಒಕ್ಕಲಿಗರು ಮಾತ್ರವಲ್ಲದೆ ಹಿಂದುಳಿದ ವರ್ಗಗಳೆಲ್ಲರ ಮುಖ್ಯವಾಣಿಯೆನಿಸಿತು. ಒಕ್ಕಲಿಗರಲ್ಲಿ ನೈತಿಕ ಮತ್ತು ಸಾಮಾಜಿಕ ಪ್ರಜ್ಞೆ ಬೆಳೆಸುವಲ್ಲಿ

ಪರಿಣಾಮಕಾರಿಯಾಗಿ ಕೆಲಸ ಮಾಡಿದವರಲ್ಲಿ ಕೆ.ಹೆಚ್. ರಾಮಯ್ಯರಂಥವರು ಮುಖ್ಯರು. ಲಿಂಗಾಯಿತ ಮತ್ತು ಒಕ್ಕಲಿಗರ ಸಂಘಗಳಂತೆಯೇ ಇತರ ವರ್ಗಗಳ ಸಂಘಗಳೂ ಸ್ಥಾಪನೆಯಾಗತೊಡಗಿದವು. 1909ರಲ್ಲಿ ಅಸ್ತಿತ್ವಕ್ಕೆ ಬಂದ ಮಹಮ್ಮದೀಯರ ಕೇಂದ್ರ ಸಂಘ, ಅನಂತರ ಸ್ಥಾಪನೆಗೊಂಡ ಕುರುಬರ ಸಂಘ ಮೊದಲಾದವು. ಅಲ್ಪಸಂಖ್ಯಾತ ಮತ್ತು ಹಿಂದುಳಿದ ವರ್ಗದವರ ಏಳಿಗೆಗಾಗಿ ಕೆಲಸ ಮಾಡಿದಂಥವು ಹಾಗೆಯೇ ದಲಿತರನ್ನು ಪ್ರತಿನಿಧಿಸುವ ಆದಿ ದ್ರಾವಿಡ ಸಂಘ ಮತ್ತು ಆದಿಜಾಂಬವ ಸಂಘಗಳೂ ಕೂಡ ತದನಂತರ ಹುಟ್ಟಿಕೊಂಡವು. ಆದ್ದರಿಂದ ಮೈಸೂರಿನ ಬ್ರಾಹ್ಮಣೇತರರು ವ್ಯವಸ್ಥಿತವಾಗಿ ಸಂಘಟನೆಗೊಳ್ಳಲು ಸಾಧ್ಯವಾಯಿತು. 'ಸರ್ಕಾರದ ನೌಕರಿಯನ್ನು ಪಡುಯುವುದೆಂದರೆ ಅಧಿಕಾರ ಕೇಂದ್ರದಲ್ಲಿ ಪಾಲು ಪಡೆಯುವುದು' ಎಂಬ ಸತ್ಯ ಅವರಿಗೆ ಗೋಚರಿಸಿತು. ಇದರ ಫಲವಾಗಿ 1917 ರಲ್ಲಿ ಹುಟ್ಟಿಕೊಂಡಿದ್ದೇ 'ಪ್ರಜಾಮಿತ್ರ ಮಂಡಲಿ' ಎಂಬ ಒಕ್ಕೂಟ. ಇದನ್ನು ವ್ಯವಸ್ಥಿತವಾಗಿ ಹುಟ್ಟು ಹಾಕಿದವರು ಮೈಸೂರು ಮಹಾರಾಜ ಕಾಲೇಜಿನಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಸಿ.ಆರ್. ರೆಡ್ಡಿ. ಈ ಒಕ್ಕೂಟವು ಬ್ರಾಹ್ಮಣೇತರರ ಮುಖ್ಯವಾಣಿಯಾಗಿ ಕೆಲಸಮಾಡ ತೊಡಗಿ ಆ ನಂತರ ಸಾಂಸ್ಕೃತಿಕ ರೂಪ ತಳೆಯಿತು. ಇದನ್ನು ಮೈಸೂರು ಸಂಸ್ಥಾನದ ಮೊದಲ ರಾಜಕೀಯ ಸಂಘಟಿತ ಪಕ್ಷವೆಂದು ಕರೆದಿರುವುದರಲ್ಲಿ ಔಚಿತ್ಯವೂ ಇದೆ. ಈ ಪಕ್ಷದಲ್ಲಿ ಲಿಂಗಾಯಿತ, ಒಕ್ಕಲಿಗ, ಮುಸ್ಲಿಂ ಕೋಮುಗಳೇ ಹೆಚ್ಚು ಪ್ರಭುತ್ವ ಹೊಂದಿದ್ದನ್ನು ದಲಿತರು ಮಾತ್ರವಲ್ಲದೆ ಬೇರೆ ಯಾವ ಹಿಂದುಳಿದ ಜಾತಿಗಳಿಗೂ ಪ್ರಾಮುಖ್ಯತೆ ಇರಲಿಲ್ಲವೆನ್ನುವುದನ್ನು ತೋರಿಸಲಾಗುತ್ತದೆ. 1917ರಲ್ಲೇ ಸ್ಥಾಪನೆಗೊಂಡ ಇನ್ನೊಂದು ಸಂಸ್ಥೆಯೆಂದರೆ 'ಮೈಸೂರು ಸಿವಿಕ್ ಅಂಡ್ ಸೋಷಿಯಲ್ ಪ್ರೊಗ್ರೆಸ್ ಅಸೋಸಿಯೇಷನ್' ಕೆಲವು ಪ್ರಜ್ಞಾವಂತ ನಾಗರೀಕರ ಪ್ರಯತ್ನದ ಫಲವಾಗಿ ಇದು ಅಸ್ತಿತ್ವಕ್ಕೆ ಬಂದಿತು. ಅದೇ ವರ್ಷ ಸೆಪ್ಟಂಬರ್ ತಿಂಗಳಿನಲ್ಲಿ ಮೈಸೂರಿನಲ್ಲಿ ಏರ್ಪಟ್ಟಿದ್ದ ಇದರ ಪ್ರಥಮ ಅಧಿವೇಶನದ ಅಧ್ಯಕ್ಷತೆವಹಿಸಿದವರು ಯುವರಾಜ ಕಂಠೀರವ ನರಸರಾಜ ಒಡೆಯರ್. ಇದರಲ್ಲಿ ಭಾಗವಹಿಸಿದವರನ್ನು ಗಮನಿಸಿದರೆ ಹಿಂದುಳಿದ ವರ್ಗಗಳ ಸಂಘಟನಾ ಕಾರ್ಯದಲ್ಲಿ ಸಮಾಜದ ವಿದ್ಯಾವಂತ ವರ್ಗ ವಹಿಸಿದ ಪಾತ್ರ ಮನದಟ್ಟಾಗುತ್ತದೆ.

ದಿವಾನರ ಸ್ಥಾನಕ್ಕೆ ಸರ್ದಾರ್ ಎಂ. ಕಾಂತರಾಜ ಅರಸ್ (1918–22) ಬಂದವರು. ಇವರು ನಾಲ್ವಡಿ ಕೃಷ್ಣರಾಜ ಒಡೆಯರ ಸೋದರ ಮಾವ. ಮೈಸೂರು ಸಂಸ್ಥಾನದ ಮೊಟ್ಟ ಮೊದಲ ಬ್ರಾಹ್ಮಣೇತರ ದಿವಾನ್, ಬ್ರಾಹ್ಮಣೇತರ ಚಳವಳಿ ಒಂದು ನಿರ್ದಿಷ್ಟ ಹಂತ ತಲುಪಲು ಮತ್ತು ಅಲ್ಪಸಂಖ್ಯಾತರ ಕುಂದು ಕೊರತೆಗಳನ್ನು ಪರಿಹರಿಸಲು ಅವಕಾಶವಾದುದು ಇವರ ಕಾಲದಲ್ಲೇ. ಇವರ ಆಡಳಿತವು ಹಿಂದುಳಿದವರ ಪಾಲಿಗೆ ಒಂದು ಪರ್ವಕಾಲವೆನ್ನಬಹುದು. ಕಾಂತರಾಜ ಅರಸ್ ಅವರು ಜಾರಿಗೊಳಿಸಿದ ಸುಧಾರಣೆಗಳಿಂದ

ಹೆಚ್ಚು ಹೆಚ್ಚು ಹಿಂದುಳಿದ ವರ್ಗದವರು ಸರ್ಕಾರಿ ಸೇವೆಗೆ ಮತ್ತು ವಿದ್ಯಾಭ್ಯಾಸಕ್ಕೆ ತೊಡಗಲು ಸಾಧ್ಯವಾಯಿತು.

ಹಿಂದುಳಿದವರ ಕೂಗಿಗೆ ಚಾಲನೆ ಮತ್ತು ಹೆಚ್ಚು ಒತ್ತನ್ನು ಕೊಟ್ಟವರು ಕಾಂತರಾಜ ಅರಸ್ ಅವರು ಇದರಿಂದ ರಾಜಕೀಯ ಬಹುವರ್ಷಗಳ ಕೋಮು ವೈಷಮ್ಯದಿಂದ ಕಲುಷಿತವಾಯಿತಂದರೂ ಬಹುಜನರ ಹಿತಾದೃಷ್ಟಿಯಿಂದ ಈ ಬೆಳವಣಿಗೆ ಚಾರಿತ್ರಿಕ ಅವಶ್ಯವಾಗಿತ್ತು. 'ಸರ್ ಲೆಸ್ಲೀ ಮಿಲ್ಲರ್ ಸಮಿತಿ' ಸಹಾ 1918ರಲ್ಲಿ ನೇಮಿಸಲ್ಪಟ್ಟಿತು[೩]. ಮುಖ್ಯವಾಗಿ ಮಿಲ್ಲರ್ ಸಮಿತಿಯ ನೇಮಕಕ್ಕೆ ಪ್ರಜಾಮಿತ್ರ ಮಂಡಲಿಯು ಮಹಾರಾಜರಿಗೆ ಸಲ್ಲಿಸಿದ ಜ್ಞಾಪನ ಪತ್ರದ ಕಾರಣ ಗ್ರಾಮಾಂತರ ಪ್ರದೇಶಗಳ ವಿದ್ಯಾರ್ಥಿಗಳು ಬ್ರಾಹ್ಮಣ ವಿದ್ಯಾರ್ಥಿಗಳೊಂದಿಗೆ ಸ್ಪರ್ಧಿಸಲು ಅಸಮರ್ಥರಾಗಿರುವುದು ಬ್ರಾಹ್ಮಣರಿಂದ ತುಂಬಿ ಹೋಗಿರುವ ಅಧಿಕಾರ ವರ್ಗದಿಂದ ಬ್ರಾಹ್ಮಣೇತರರ ಹಿತಕ್ಕೆ ದಕ್ಕೆ ಒದಗಿರುವುದು. ಬ್ರಾಹ್ಮಣೇತರರಿಗೆ ಹೆಚ್ಚಿನ ನೌಕರಿ ಕಲ್ಪಿಸುವುದರೊಡನೆ ಸಂಸ್ಥಾನದ ಹೊರಗಿನಿಂದ ಬ್ರಾಹ್ಮಣೇತರ ವಿದ್ಯಾವಂತರನ್ನು ಕರೆಸುವುದು. ಬ್ರಾಹ್ಮಣೇತ್ತರಿಗೆ ವಿದ್ಯಾರ್ಹತೆ ಸಡಿಲಿಸಿ ಒಂದೇ ವರ್ಗದ 'ಏಕಸ್ವಾಮ್ಯತೆ'ಯನ್ನು ಮತ್ತು ಆಳಿತವನ್ನು ತಪ್ಪಿಸುವುದು, ಇವು ಪ್ರಜಾ ಮಿತ್ರ ಮಂಡಲಿ ಪ್ರತಿನಿಧಿಗಳು ಸಲ್ಲಿಸಿದ ಬೇಡಿಕೆಗಳು. ಇದನ್ನು ಸಹಾನುಭೂತಿಯಿಂದ ಪರಿಶೀಲಿಸಲು ಭರವಸೆ ನೀಡಿದ ನಾಲ್ವಡಿ ಕೃಷ್ಣರಾಜ ಒಡೆಯರ್ 1918 ಆಗಸ್ಟ್ 4 ರಂದು ಸಮಿತಿಯೊಂದನ್ನು ರಚಿಸಿದರು. ಇದರ ಅಧ್ಯಕ್ಷರಾಗಿ ನೇಮಕಗೊಂಡವರು ರಾಜ್ಯದ ಮುಖ್ಯ ನ್ಯಾಯಾಧೀಶರಾಗಿದ್ದ ಸರ್. ವೆಲ್ಲೆಸ್ಲಿ ಮಿಲ್ಲರ್. ಅನಂತರ ಈ ಸಮಿತಿ 'ಮಿಲ್ಲರ್ ಸಮಿತಿ' ಎಂದೇ ಪ್ರಸಿದ್ಧಿ ಪಡೆಯಿತು. ಈ ಸಮಿತಿ ತನ್ನ ವರದಿಯನ್ನು 1919 ಜುಲೈನಲ್ಲಿ ಸಲ್ಲಿಸಿತ್ತು[೪].

ಭಾರತಕ್ಕೆ ಸ್ವತಂತ್ರ ಲಭಿಸಿದ ನಂತರ ಹಿಂದುಳಿದ ಮತ್ತು ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡಗಳವರ ಅಭಿವೃದ್ಧಿ ವಿಚಾರದಲ್ಲಿ ಮಹತ್ತರವಾದ ಬದಲಾವಣೆಗಳು ಕಂಡುಬಂದುದು ಸಹಜ. ಹಿಂದುಳಿದ ವರ್ಗಗಳು ತಮ್ಮ ತಮ್ಮಲ್ಲಿಯೇ ಸಂಘರ್ಷ ಮತ್ತು ಶೋಷಣೆಗಳನ್ನು ಅರ್ಥಮಾಡಿಕೊಳ್ಳತೊಡಗಿದವು. 1930ರಲ್ಲಿ ಮೈಸೂರು ಪ್ರಾಂತದ‌ಲ್ಲಿ ಪ್ರಜಾ ಪಕ್ಷವು ಸ್ಥಾಪನೆಯಾದಾಗ ಎರಡು ಪ್ರಮುಖ ಜಾತಿಗಳ ಮುಖಂಡರು ಹೆಚ್ಚು ಪ್ರಚಾರಕ್ಕೆ ಬಂದುದ್ದನ್ನು ಕಾಣುತ್ತೇವೆ[೫]. ಲಿಂಗಾಯಿತ ಮತ್ತು ಒಕ್ಕಲಿಗ ಇವೇ ಆ ಎರಡು ಪ್ರಬಲ ಜಾತಿಗಳು. ಸ್ವಾತಂತ್ರ್ಯ ಅನಂತರದ ಮೈಸೂರು ರಾಜಕಾರಣವು ಬಹುಮುಖ್ಯವಾಗಿ ಒಕ್ಕಲಿಗರ ಹಿಡಿತದಲ್ಲಿದ್ದು, ಅದರ ಅನಂತರದ ಸ್ಥಾನದಲ್ಲಿ ಲಿಂಗಾಯಿತರಿದ್ದುದ್ದು ಸ್ಪಷ್ಟ. ಈ ಪರಿಸ್ಥಿತಿ ಕರ್ನಾಟಕದ ಏಕೀಕರಣದವರೆಗೆ ಅಂದರೆ 1956ರವರೆಗೂ ಮುಂದುವರೆದುಕೊಂಡು ಬಂದಿತಲ್ಲದೇ ಬದಲಾದ ರಾಜಕೀಯ ದೃಷ್ಟಿ–ಧೋರಣೆಗಳ ಕಾರಣವಾಗಿ ಹಿಂದುಳಿದ ಇತರೆ ವರ್ಗಗಳು ಅಥವಾ ಲಿಂಗಾಯಿತ ಮತ್ತು ಒಕ್ಕಲಿಗರೇತರರು ಎಚ್ಚೆತ್ತುಕೊಳ್ಳಲಾರಂಭಿಸಿದವು.

ವಾಸ್ತವದಲ್ಲಿ ಬ್ರಾಹ್ಮಣೇತರ ಜಾತಿಗಳೂ ತಾವು ಆರಂಭಿಸಿದ ಚಳವಳಿಯಲ್ಲಿ ಸಮಾಜದ ಎಲ್ಲಾ ಜಾತಿ ಸಮುದಾಯದವರನ್ನು ಒಳಗೊಂಡಿದ್ದವೇ? ಈ ಹಂತದಲ್ಲಿ ಚರಿತ್ರೆಕಾರರು ಗುರುತಿಸುವ ಮುಖ್ಯ ಅಂಶವೆಂದರೇ ರಾಜ್ಯದ ಶೇಕಡಾ 95 ಜನಸಂಖ್ಯೆಯನ್ನು ಪ್ರತಿನಿಧಿಸುತ್ತಿದ್ದೇವೆ ಎಂದು ಹೇಳಿಕೊಳ್ಳಲು ಪರಿಶಿಷ್ಟ ಜಾತಿ-ಪಂಗಡದವರನ್ನು ಜೊತೆಗೆ ಸೇರಿಸಿಕೊಂಡು ವಾಸ್ತವದಲ್ಲಿ ಪಂಚಮರ ಅಭ್ಯುದಯಕ್ಕಾಗಿ ಬ್ರಾಹ್ಮಣೇತರ ಚಳವಳಿಯು ಹೆಚ್ಚು ಶ್ರಮಿಸಿದೆ. ನಾಯಕತ್ವ ಗುಂಪಿನ ತಮ್ಮ ತಮ್ಮ ಕೋಮುಗಳ (ಲಿಂಗಾಯಿತ ಮತ್ತು ಒಕ್ಕಲಿಗ) ಹಿತ ಸಾಧಿಸುವುದರಲ್ಲೇ ಹೆಚ್ಚು ಆಸಕ್ತಿಯನ್ನು ವಹಿಸಿದ್ದರು. ಏಕೀಕೃತ ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ ಲಿಂಗಾಯಿತರು ಶೇಕಡಾ 15ರಷ್ಟು ಪ್ರತಿಶತವಿದ್ದರೆ, ಒಕ್ಕಲಿಗರು ಶೇಕಡಾ 11ರಷ್ಟು ಪ್ರತಿಶತವಿರುವುದು ಸಿದ್ಧಗೊಂಡು ರಾಜಕೀಯ ಆಕರ್ಷಣ ಕೇಂದ್ರ ಮೈಸೂರು ಪ್ರಾಂತ್ಯದಿಂದ ಮುಂಬೈ ಕರ್ನಾಟಕದ ಕಡೆಗೆ ವಾಲಿತೆಂಬುದು ಗಮನಾರ್ಹ.

ಏಕೀಕೃತ ಕರ್ನಾಟಕದಲ್ಲಿ ಮೀಸಲಾತಿ ನೀತಿ ಇಡೀ ರಾಜ್ಯಕ್ಕೆ ಅನ್ವಯಿಸಿತಲ್ಲದೆ ಹೊಸ ಹೊಸ ಸಮಸ್ಯೆಗಳನ್ನು ಅದು ಎದುರಿಸುವಂತಾಯಿತು. ಈ ಬೆಳವಣಿಗೆಯನ್ನು ಕರ್ನಾಟಕದ ರಾಜಕೀಯದಲ್ಲಿ ದಿವಂಗತ ಡಿ. ದೇವರಾಜ ಅರಸು ಅವರ (1972-1979) ಆಡಳಿತ ಅವಧಿಯಿಂದ ಗುರುತಿಸಲಾಗಿದ್ದು[ಥಿ], ಅಪಾರ ಬಹುಸಂಖ್ಯಾತ ಅಧಿಕಾರ ವಂಚಿತ ಹಿಂದುಳಿದ ವರ್ಗಗಳು ರಾಜಕೀಯದೆಡೆಗೆ ಮತ್ತು ಪ್ರತಿನಿಧಿಸಲು ಸಾಧ್ಯವಾಯಿತು. ಅರಸು ಅವರ ಅನಂತರದ ಕಾಲಾವಧಿಯು ಹಿಂದುಳಿದ ವರ್ಗಗಳನ್ನು ಮತ್ತಷ್ಟು ರಾಜಕೀಯವಾಗಿ ಸಂಘಟಿತರಾಗಲು ಸಾಧ್ಯವಿಲ್ಲವಾದರೂ ಇಂದಿಗೂ ಕೂಡ ಹಿಂದುಳಿದ ವರ್ಗಗಳು ಅಧಿಕಾರ ವಂಚಿತ ಸಮೂಹಗಳಾಗಿ ಮತ್ತು ಅಸಂಘಟಿತ ರಾಜಕೀಯ ಗುಂಪುಗಳಾಗಿ ಒಂದೇ ಕಡೆ ನೆಲೆಯೂರದೆ ಕೇವಲ ಬೆರಳೆಣಿಕೆಯಷ್ಟೆ ನಾಯಕತ್ವವನ್ನು ಕಾಣಲು ಸಾಧ್ಯವಾಗಿದೆ. 2020ರಲ್ಲಿ ಕರ್ನಾಟಕ ರಾಜ್ಯ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ 15ರಷ್ಟಿರುವ ಒಕ್ಕಲಿಗ ಸಮುದಾಯದ 06 ಜನರು; ಕೆ.ಸಿ.ರೆಡ್ಡಿ, ಕೆಂಗಲ್ ಹನುಮಂತಯ್ಯ, ಎಚ್.ಡಿ.ದೇವೇಗೌಡ, ಎಸ್.ಕೃಷ್ಣ, ಎಚ್.ಡಿ.ಕುಮಾರಸ್ವಾಮಿ ಹಾಗೂ ಡಿ.ವಿ.ಸದಾನಂದಗೌಡ ಅವರು ಮುಖ್ಯಮಂತ್ರಿ ಪಟ್ಟ ಅಲಂಕರಿಸಿದರೆ, ಶೇಕಡಾ 18ರಷ್ಟಿರುವ ಲಿಂಗಾಯಿತ-ವೀರಶೈವ ಜನಾಂಗದ 08 ಜನರು; ಕಡಿದಾಳು ಮಂಜಪ್ಪ, ಎಸ್.ನಿಜಲಿಂಗಪ್ಪ, ಬಿ.ಡಿ.ಜತ್ತಿ, ಎಸ್.ಆರ್.ಕಂಠಿ, ವಿರೇಂದ್ರಪಾಟೀಲ್, ಎಸ್.ಆರ್.ಬೊಮ್ಮಾಯಿ, ಬಿ.ಎಸ್.ಯಡಿಯೂರಪ್ಪ ಮತ್ತು ಜಗದೀಶ್ ಶೆಟ್ಟರ್ ಅವರು ಮುಖ್ಯಮಂತ್ರಿಗಳು ಆಗಿದ್ದರೆ, ಶೇಕಡಾ 60 ರಿಂದ 70ರಷ್ಟಿರುವ ಅಹಿಂದ ವರ್ಗದ 05 ಜನರು; ಡಿ.ದೇವರಾಜ ಅರಸು, ಎಸ್.ಬಂಗಾರಪ್ಪ, ಡಾ.ಎಂ.ವೀರಪ್ಪಮೊಯ್ಲಿ, ಎನ್.ಧರ್ಮಸಿಂಗ್ ಮತ್ತು ಸಿದ್ಧರಾಮಯ್ಯ ಅವರು ಮುಖ್ಯಮಂತ್ರಿಗಳಾಗಿದ್ದಾರೆ. ಹಾಗೆಯೇ ಶೇಕಡಾ 2 ರಿಂದ 3ರಷ್ಟಿರುವ ಬ್ರಾಹ್ಮಣ ಸಮುದಾಯದ ಆರ್.ಗುಂಡೂರಾವ್ ಮತ್ತು ರಾಮಕೃಷ್ಣ ಹೆಗ್ಗಡೆ ಅವರು ಕರ್ನಾಟಕ ರಾಜ್ಯದ

ನಾಯಕತ್ವವನ್ನು ಮಾತ್ರ ಅಲಂಕರಿಸಿದ್ದಾರೆ. ಅದರಲ್ಲೂ ದಲಿತರು ಮತ್ತು ಅಲ್ಪಸಂಖ್ಯಾತರ ಸಮುದಾಯದ ವರ್ಗಗಳು ಈ ಎಲ್ಲಾ ಜನಸಮುದಾಯಗಳಗಿಂತ ಹೆಚ್ಚಿದ್ದರೂ ಕೂಡ ಈವರೆಗೂ ಕರ್ನಾಟಕ ರಾಜ್ಯದ ಅಧಿಕಾರದ ಗದ್ದುಗೆಯನ್ನು ಹಿಡಿಯಲು ಸಾಧ್ಯವಾಗಿಲ್ಲ ಎಂಬುದು ಕರ್ನಾಟಕ ರಾಜ್ಯದ ದುರಂತದ ಸಂಗತಿಯೇ ಆಗಿರುತ್ತದೆ.

**ಕೊನೆಟಿಪ್ಪಣಿಗಳು**

[i] Bairy, Ramesh, Being Brahmin, Being Modern: Exploring the Lives of Caste Today, Routledge, 2013, P.NO- 143

[ii] ಲಕ್ಷಣ ತೆಲಗಾವಿ, ಹಿಂದುಳಿದ ವರ್ಗಗಳ ಮತ್ತು ದಲಿತ ಚಳವಳಿಗಳು, ಪ್ರಸಾರಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 1999, ಪುಟ- 13-17.

[iii] ನಾಗೇಶ್. ಎಚ್.ವಿ. ದೊಡ್ಡಬೆಟ್ಟದ ನೋಟ ಸಮಾಜಶಾಸ್ತ್ರೀಯ ಕಣ್ಣಲೆಯ ಪ್ರಬಂಧಗಳು, 2004, ಪುಟ- 94-97

[iv] ಶಂಕರರಾವ್. ಚ.ನ. ಸಾಮಾಜಿಕ ಆಂದೋಲನಗಳು, ಜೈ ಭಾರತ್ ಪ್ರಕಾಶನ, ಮಂಗಳೂರು, 2012, ಪುಟ-165

[v] ಡಾ. ಸೂರ್ಯನಾಥ ಕಾಮತ್, ಕರ್ನಾಟಕದ ಸಂಕ್ಷಿಪ್ತ ಇತಿಹಾಸ, ಪುಟ-295.

[vi] ಕನ್ನಡ ವಿಷಯ ವಿಶ್ವಕೋಶ ಕರ್ನಾಟಕ (ಪರಿಷ್ಕೃತ), ಸಂಪುಟ-1, ಪುಟ-498.

[vii] Miller Committee Report, 1919 Government of Mysore, P-4.

[viii] Mandal Commission Report, Vol. – IV, 1980, Pa-151.

[ix] ಶೂದ್ರ ಶ್ರೀನಿವಾಸ್, ಅರಸು, ಒಂದು ಅವಲೋಕನ (ಸಂ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006, ಪುಟ-156.